

# ಹಸಿರು ಚರ್ಚ್!

ಇದು ಒಂದು ಚರ್ಚ್ ಕಟ್ಟಡ. ಈ ಕಟ್ಟಡ ಕಟ್ಟಿದ್ದಲ್ಲ; ಬೆಳೆಸಿದ್ದು. ಕಲ್ಲು, ಮಣ್ಣು, ಸಿಮೆಂಟ್ ಮುಂತಾದವುಗಳನ್ನು ಬಳಸದೆ ನಿರ್ಮಿಸಿದ ಅಪರೂಪದ ಚರ್ಚ್. ಗಿಡ ಗಂಟಿ, ಬಳ್ಳಿಗಳೇ ಈ ಕಟ್ಟಡದ ಗೋಡೆ, ಮಾಡು ಎಲ್ಲವೂ ಆಗಿವೆ. ವೃಕ್ಷ ಪ್ರೇಮಿ ಬ್ಯಾರಿ ಕಾಕ್ಸ ಎಂಬ ಸಾಹಸಿಯ ಕನಸಿನ ಕೂಸು ಇದು. ಈ ಕನಸನ್ನು ನನಸಾಗಿಸಲು ಆತ ನಾಲ್ಕು ವರ್ಷಗಳ ಕಾಲ ನಿರಂತರವಾಗಿ ಬಿಡುವಿಲ್ಲದೆ ಶ್ರಮಿಸಿದ್ದಾನೆ.

ತಾನೇ ನಿರ್ಮಿಸಿದ ವಿಶಿಷ್ಟವಾದ ಉಪಕರಣವೊಂದರಿಂದ ಹಲವಾರು ಗಿಡಗಳನ್ನು ಬೇರು ಸಹಿತ ಕಿತ್ತು, ತನಗೆ ಬೇಕಾದ ಸ್ಥಾನದಲ್ಲಿ ನೆಟ್ಟಿದ್ದಾನೆ. ಹೀಗೆ ಕಿತ್ತು ನೆಡುವಾಗ ಗಿಡಗಳಿಗೆ ಯಾವ ಹಾನಿಯೂ ಆಗದಂತೆ ನೋಡಿಕೊಂಡಿದ್ದಾನೆ. ಅವುಗಳ ಶಾಖೆ–ಉಪಶಾಖೆಗಳನ್ನು ಕಟ್ಟಡದ ವಿನ್ಯಾಸಕ್ಕೆ ತಕ್ಕಂತೆ ಬೆಳೆಸಲು ಅವಶ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡಿದ್ದಾನೆ. ಗಿಡಗಳ ಕ್ರಮಬದ್ಧ ಬೆಳವಣಿಗೆಗೆ ಪೂರಕವಾಗುವಂತೆ ನೆಲವನ್ನು ಹದಗೊಳಿಸಿ ಗೊಬ್ಬರ ಹಾಕಿದ್ದಾನೆ. ಈಗ ಅದಕ್ಕೊಂದು ಮನಮೋಹಕ ರೂಪ ಬಂದಿದೆ. ಒಟ್ಟಿನಲ್ಲಿ ಅದೊಂದು ಜೀವಂತ ಹಸಿರು ವೃಕ್ಷಗಳ ಅನನ್ಯವಾದ ಕಲಾತ್ಮಕ ಅಭಿವ್ಯಕ್ತಿ.

ಇದಕ್ಕಾಗಿ ಆತ ಬಳಸಿದ್ದು ತನ್ನದೇ ಆದ 3 ಎಕರೆ ನೆಲವನ್ನು. ಇದು ನ್ಯೂಜಿಲಂಡ್ ದೇಶದ ಉತ್ತರದ ದ್ವೀಪದಲ್ಲಿದೆ. ಜಲನಿರೋಧಕ ಅಲ್ಡರ್ ಮರಗಳು ಚರ್ಚ್ ಕಟ್ಟಡದ ಮೇಲ್ಹಾವಣಿಯಾಗಿದ್ದರೆ, ಆಸ್ಟ್ರೇಲಿಯನ್ ಮರಗಳು ಗೋಡೆಯಾಗಿ ನಿಂತಿವೆ. ಚರ್ಚ್‌ನ ಎದುರಿಗೆ ವೃತ್ತಾಕಾರದ ಮಾರ್ಗವನ್ನು ಹೊಂದಿದ ಒಂದು ಸ್ಥಳವಿದೆ. ಅದು ಧ್ಯಾನ ಮಾಡಲು ನಿರ್ಮಿಸಿದ ಸ್ಥಳವಂತೆ.

ಇಲ್ಲಿನ ವೃಕ್ಷಗಳಿಗೀಗ ನಾಲ್ಕು ವರ್ಷದ ಪ್ರಾಯ. ನೋಡುವವರಿಗೆ ಅವು 10 ವರ್ಷದಷ್ಟು ದೊಡ್ಡವು ಎನಿಸುವಂತೆ ಬೆಳೆದಿವೆ. ಅದಕ್ಕೆ ಕಾರಣ ಕಾಕ್ಸನ ಪ್ರೀತಿಯ ಪೋಷಣೆ ಹಾಗೂ ಮುತುವರ್ಜಿ!

**■ ಸುಭಾಸ ಯಾದವಾಡ**





